**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜೇವರ್ಗಿ.**

**ಸಿ ಸಿ ನಂ.32/2026**

**ಫಿರ್ಯಾದಿದಾರರು :-** ಯಡ್ರಾಮಿ ಪೊಲೀಸ್ ಠಾಣೆ

**: ವಿರುದ್ದ :**

**ಆರೋಪಿತರು:**

1. ಆನಂದ ತಂದೆ ನಾಗಪ್ಪ ಕೋರವಾರ
   ವಃ 38 ವರ್ಷ, ಉಃ ಒಕ್ಕಲುತನ,
   ಸಾಃ ಮಳ್ಳಿ, ತಾಃ ಯಡ್ರಾಮಿ

2. ನಾಗಪ್ಪ ತಂದೆ ಭೀಮರಾಯ ಕೋರವಾರ
   ವಃ 60 ವರ್ಷ, ಉಃ ಒಕ್ಕಲುತನ,
   ಸಾಃ ಮಳ್ಳಿ, ತಾಃ ಯಡ್ರಾಮಿ

3. ಬಾಳಮ್ಮ ಗಂಡ ನಾಗಪ್ಪ ಕೋರವಾರ
   ವಃ 58 ವರ್ಷ, ಉಃ ಮನೆಕೆಲಸ,
   ಸಾಃ ಮಳ್ಳಿ, ತಾಃ ಯಡ್ರಾಮಿ

**ದೋಷಾರೋಪಣೆ**

**ಶ್ರೀ ಕಾಶಿನಾಥ ವಿ. ಉಪ್ಪಾರ್, ಬಿ.ಎಸ್.ಸಿ. ಎಲ್‌ಎಲ್.ಬಿ.,** ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಜೇವರ್ಗಿ, ಆದ ನಾನು, ಆರೋಪಿತರಾದ ನಿಮ್ಮ ವಿರುದ್ದ ಈ ಕೆಳಕಾಣಿಸಿದ ಅಪಾದನೆಗಳನ್ನು ರೂಪಿಸಿರುತ್ತೆನೆ.

1. ದಿನಾಂಕ 25-10-2025 ರಂದು ರಾತ್ರಿ 09-00 ಗಂಟೆ ಸುಮಾರಿಗೆ ಯಡ್ರಾಮಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಮಳ್ಳಿ ಗ್ರಾಮದ ಫಿರ್ಯಾದಿದಾರರ ಮನೆಯ ಮುಂದೆ, ಸಾಕ್ಷಿ ನಂ.1, 4, 5 ಅವರು ತಮ್ಮ ಮನೆಯ ಮುಂದೆ ನಿಂತಾಗ ಆರೋಪಿತರು ಸಾಕ್ಷಿ ನಂ.1, 4, 5 ಅವರ ಜೊತೆ ವಿನಾಕಾರಣ ಜಗಳ ತೆಗೆದು ಸಾಕ್ಷಿ ನಂ.1, 4, 5

ಅವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ದು, ಸಾರ್ವಜನಿಕವಾಗಿ ಅವಮಾನ ಪಡಿಸಿರುತ್ತಿರಿ, ಆ ಮೂಲಕ ಭಾ.ನ್ಯಾ.ಸಂಹೀತಾ ಕಲಂ 352 ಸಹ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

2. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಅಕ್ರಮ ಕೂಟ ಕಟ್ಟಿಕೊಂಡು ಬಂದು 3ನೇ ಆರೋಪಿ ಸಾಕ್ಷಿ ನಂ.1 ನೆದ್ದವರಿಗೆ ಕೈಯಿಂದ ಕಪಾಳಕ್ಕೆ ಹೊಡೆದು ಗುಪ್ತಗಾಯ ಪಡಿಸಿರುತ್ತಿರಿ, ಆರೋಪಿ ನಂ.2 ನೆದ್ದವರು ಕೈಯಿಂದ ಸಾಕ್ಷಿ ನಂ.5 ನೆದ್ದವರಿಗೆ ಕೈಯಿಂದ ಕಪಾಳಕ್ಕೆ ಹೊಡೆದು ಗುಪ್ತಗಾಯ ಪಡಿಸಿರುತ್ತಾರೆಂದು, ಆ ಮೂಲಕ ಭಾ.ನ್ಯಾ.ಸಂಹೀತಾ ಕಲಂ 115(2) ಸಹ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

3. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಅಕ್ರಮ ಕೂಟ ಕಟ್ಟಿಕೊಂಡು ಬಂದು, ಚಾಸಾ-1 ಅವರಿಗೆ ಜಾಗದ ವಿಚಾರವಾಗಿ ವಿನಾಕಾರಣ ಜಗಳ ತೆಗೆದು ಆರೋಪಿ ನಂ.1 ನೆದ್ದವನು ಬಡಿಗೆಯಿಂದ ಚಾಸಾ-1 ರವರ ಬೆನ್ನಿನ ಮೇಲೆ ಹೊಡೆದು ಗುಪ್ತಗಾಯ ಪಡಿಸಿರುತ್ತಾನೆ, ಆ ಮೂಲಕ ಭಾ.ನ್ಯಾ.ಸಂಹೀತಾ ಕಲಂ 118 (1) ಸಹ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

4. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಅಕ್ರಮ ಕೂಟ ಕಟ್ಟಿಕೊಂಡು ಬಂದು, ಚಾಸಾ-1 ಅವರಿಗೆ ಜಾಗದ ವಿಚಾರವಾಗಿ ವಿನಾಕಾರಣ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದಿದ್ದಲ್ಲದೆ, ಆರೋಪಿ ನಂ.1 ನೆದ್ದವನು ಚಾಸಾ-1 ರವರಿಗೆ ಮಾನಭಂಗ ಮಾಡುವ ಉದ್ದೇಶದಿಂದ ಸೀರೆಯ ಸೆರಗನ್ನು ಹಿಡಿದು ಎಳೆದಾಡಿ ಮಾನಭಂಗ ಪಡಿಸಿರುತ್ತಾನೆಂದು, ಆ ಮೂಲಕ ಭಾ.ನ್ಯಾ.ಸಂಹೀತಾ

ಕಲಂ 74 ಸಹ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

5. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಅಕ್ರಮ ಕೂಟ ಕಟ್ಟಿಕೊಂಡು ಬಂದು, ಸಾಕ್ಷಿ ನಂ.1, 4, 5 ಅವರಿಗೆ ಹೊಡಿಬಡಿ ಮಾಡಿದ್ದಲ್ಲದೆ, ನಮಗೆ ಬರಬೇಕಾದ ಜಾಗ ನಮಗೆ ಸರಿಯಾರಿ ಹಂಚಿಕೆ ಮಾಡಿ ಕೊಡದಿದ್ದರೆ ನಿಮಗೆ ಜೀವ ಸಹಿತ ಬಿಡುವುದಿಲ್ಲ ಖಲಾಸ ಮಾಡುತ್ತೇವೆಂದು ಜೀವ ಬೇದರಿಕೆ ಹಾಕಿರುತ್ತಿರಿ, ಆ ಮೂಲಕ ಭಾ.ನ್ಯಾ.ಸಂಹೀತಾ ಕಲಂ 351(2) ಸಹ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ನೀವು ಮೇಲೆ ಹೇಳಿದ ಅಪಾದನೆಗೆ ಈ ನ್ಯಾಯಾಲಯದ ಮುಂದೆ ನೀವು ವಿಚಾರಣೆ ಎದುರಿಸಬೇಕೆಂದು ಆದೇಶಿಸುತ್ತೇನೆ.

ದಿನಾಂಕ 26-05-2026

ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಜೇವರ್ಗಿ.

**ಆರೋಪಿಗಳ ಹೇಳಿಕೆ**

ಪ್ರಶ್ನೆ-1: ಈಗ ನಿಮಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿದ ಆರೋಪಣೆಯನ್ನು ಅರ್ಥಮಾಡಿಕೊಂಡಿದಿರಾ?

ಉ : ಆ-1 ಆ-2

ಆ-3

ಪ್ರಶ್ನೆ -2 : ಆರೋಪಣೆಯನ್ನು ಒಪ್ಪುವಿರಾ ಅಥವಾ ವಿಚಾರಣೆ ನಡೆಸಬೇಕೆ?

ಉ : ಆ-1 ಆ-2

ಆ-3

(ಈ ಮೂಲಕ ದೃಢೀಕರಿಸುವುದೇನೆಂದರೆ ಮೇಲೆ ಕೊಟ್ಟಂತಹ ಹೇಳಿಕೆಗಳು ಆರೋಪಿತರ ನಿಜವಾದ ಹೇಳಿಕೆಗಳಿರುತ್ತವೆಂದು ಪ್ರಮಾಣಿಕರಿಸಲಾಗಿದೆ)

ದಿನಾಂಕ 26-05-2026 ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಜೇವರ್ಗಿ.